ಓಎಸ್ಃ 248/06 ಡಿಡಬ್ಲ್ಯು 6 ಬಿ. ಎನ್. ಶ್ವೇತಾಚಲ

ಸಾಕ್ಷಿಯನ್ನು ದಿಃ 14.12.2017 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ 3 ನೇ ಪ್ರತಿವಾದಿ ಪರ ಶ್ರೀ ಪಿ ಎಲ್ ಕೆ ವಕೀಲರಿಂದಃ

ನಾನು ಈ ದಾವೆಯ 3 ನೇ ಪ್ರತಿವಾದಿಯ ಎಸ್ ಪಿ ಎ ಹೋಲ್ಡರ್ ಇರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ.

ನನ್ನ ತಾಯಿ ನೀಡಿದ ಅಧಿಕಾರ ಪತ್ರವನ್ನು ನಿಡಿ 61 ಎಂದು, ಮೈಸೂರು ಟೀಚರ ಸೊಸೈಟಿಯಿಂದ ನಮ್ಮ ತಾಯಿಗೆ ಸೈಟ್ ನಂಃ 7 ನ್ನು ಮಂಜೂರು ಮಾಡಿದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ. 62 ಎಂದು, 1990 ನೇ ಸಾಲಿನಲ್ಲಿ ಸದರಿ ಸೊಸೈಟಿಯವರು ಬರೆದುಕೊಟ್ಟ ಲೀಸ್ ಕಂ ಸೇಲ್ ಡೀಡನ್ನು ಹಾಜರುಪಡಿಸಿದ್ದು ಅದನ್ನು ನಿಡಿ. 63 ಎಂದು, ಕ್ರಯದ ತಿದ್ದುಪಡಿ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಡಿ 64 ಎಂದು, ಎರಡು ಸ್ವಾಧೀನ ಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ 65 ಮತ್ತು 66 ಎಂದು, ಅಲಾಟ್ ಮೆಂಟ್ ಫಾರಂ ನ್ನು ನಿಡಿ. 67 ಎಂದು, ಮುಡಾದವರಿಗೆ ಟ್ಯಾಕ್ಸ್ ಕಟ್ಟಿದ ಬಗ್ಗೆ ಚಲನ್‌ನ್ನು ನಿಡಿ. 68 ಎಂದು, ಮುಡಾದವರು ನೀಡಿದ ಖಾತಾ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಡಿ 69 ಎಂದು, ಖಾತೆ ಮಾಡಿದ ಮೇಲೆ ಮೊದಲ ಬಾರಿಗೆ ತೆರಿಗೆ ನಿಗದಿ ಪಡಿಸಿದ ಬಗ್ಗೆ ಉತ್ತರ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಡಿ .70 ಎಂದು, ಸೊಸೈಟಿಯವರು ನೀಡಿದ ಎನ್‌ಒಸಿ ಯನ್ನು ನಿಡಿ. 71 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಆರ್ ಆರ್ ಎನ್ ವಕೀಲರಿಂದ

ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ. ಸರಿ ಇದೆ

ಸಹಿ/-

ಪ್ರಧಾನ ಲಘು ವ್ಯವಹಾರಗಳ ನ್ಯಾಯಾಧೀಶರು,
ಮತ್ತು ಎಂಎಸಿಟಿ, ಮೈಸೂರು